ಶ್ರವಣ ದೋಷ ಶಿಕ್ಷಣ, ಉದ್ಯೋಗಕ್ಕೂ ತೊಡಕು

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಆಯುಕ್ತ ಡಾ.ಎಸ್.ವಿ. ವೆಂಕಟರಮಣ ಸ್ವಾಮಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಶ್ರವಣ ದೋಷ ಇದ್ದರೆ ಸಂವಹನಕ್ಕಷ್ಟೇ ತೊಂದರೆಯಾಗದೆ, ಶಿಕ್ಷಣ, ಉದ್ಯೋಗಕ್ಕೂ ತೊಡಕಾಗುತ್ತದೆ. ಹೀಗಾಗಿ ಆರಂಭಿಕ ಹಂತದಲ್ಲೇ ಶ್ರವಣ ದೋಷಕ್ಕೆ ಚಿಕಿತ್ಸೆ ನೀಡಬೇಕು ಎಂದು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಆಯುಕ್ತ ಡಾ.ಎಸ್.ವಿ. ವೆಂಕಟರಮಣ ಸ್ವಾಮಿ ತಿಳಿಸಿದರು.

ನಗರದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ (ಆಯಿಷ್) ಬುಧವಾರ ನಡೆದ ಅಂತಾರಾಷ್ಟ್ರೀಯ ಶ್ರವಣಶಾಸ್ತ್ರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಜನರೊಂದಿಗೆ ಸಂವಹನ ನಡೆಸಲು ಶ್ರವಣವು ಪ್ರಮುಖ ಇಂದ್ರಿಯವಾಗಿ ಕೆಲಸ ಮಾಡುತ್ತದೆ. ಶ್ರವಣ ದೋಷದಿಂದ ಜನ ಜೀವನದ ಗುಣಮಟ್ಟದ ಮೇಲೆ ಪರಿಣಾಮ



ಮೈಸೂರಿನ ಆಯಿಷ್ ನಲ್ಲಿ ಬುಧವಾರ ನಡೆದ ಅಂತಾರಾಷ್ಟ್ರೀಯ ಶ್ರವಣಶಾಸ್ತ್ರ ಸಮ್ಮೇಳನದಲ್ಲಿ ಡಾ.ಸಿ.ಎಸ್. ವನಜಾ ಅವರಿಗೆ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೀರುತ್ತದೆ. ವ್ಯಕ್ತಿತ್ವ ವಿಕಾಸಕ್ಕೆ ಶ್ರವಣವು ಸಹಕಾರಿ. ಆ ಮೂಲಕ ಹೊಸ ವಿಷಯಗಳನ್ನು ಕಲಿಯಲು, ಜನರೊಂದಿಗೆ ಬೆರೆಯಲು ಸಾಧ್ಯ ಎಂದರು.

ಆಯಿಷ್ ಸಂಸ್ಥೆಯು ಶಿಕ್ಷಣ, ಸಂಶೋಧನೆ, ವೈದ್ಯಕೀಯ ಸೇವೆ ಮತ್ತು ಸಂವಹನ ದೋಷ ಹೊಂದಿರುವವರಿಗೆ ಪುನರ್ವಸತಿ ಕಲ್ಪಿಸುವ ಮೂಲಕ ಮಕ್ಕಳ ಮುಖದಲ್ಲಿನ ಸಂತೋಷ ದುಪ್ಪಟ್ಟಾಗುವಂತೆ ಮಾಡುತ್ತಿದೆ. ಅಂತಾರಾಷ್ಟ್ರೀಯ ಸಮ್ಮೇಳನಗಳು ವೈಜ್ಞಾನಿಕ ಜ್ಞಾನ, ಸಂಶೋಧನೆ ಗಳ ಫಲಿತಾಂಶ ಹಾಗೂ ವೈದ್ಯಕೀಯ ಅನುಭವಗಳ ವಿನಿಮಯಕ್ಕೆ ವೇದಿಕೆ ಕಲ್ಪಿಸುತ್ತದೆ ಎಂದು ಅವರು ಹೇಳಿದರು.

ಅಂಗವಿಕಲರಿಗೆ ಸಮಾನ ಗೌರವ ಕಲ್ಪಿಸುವುದು ನಮ್ಮ ಕರ್ತವ್ಯ. ಅವರು ಸ್ವಾವಲಂಬಿಯಾಗಿ ಬದುಕಲು ಅಗತ್ಯವಾದ ಅವಕಾಶ ಸೃಷ್ಟಿಸುವುದು ಸಮಾಜದ ಜವಾಬ್ದಾರಿ ಎಂದರು.

ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪವತಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸಲು, ಪ್ರಾಯೋಗಿಕ ಸವಾಲು ಗುರುತಿಸಲು ಕೇವಲ ಸಿದ್ಧ ಉತ್ತರ ಹುಡುಕುವ ಬದಲು, ಶಾಶ್ವತ ಪರಿಹಾರ ಕಂಡುಹಿಡಿಯಿರಿ ಎಂದರು.

ಇದೇ ವೇಳೆ ಸಂಸ್ಥೆಯ ಡಾ.ಸಿ.ಎಸ್. ವನಜಾ ಅವರಿಗೆ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರವಣಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಪಿ. ಪ್ರಶಾಂತ ಪ್ರಭು, ಸಮ್ಮೇಳನದ ಸಂಚಾಲಕ ನೀರಜ್ ಕುಮಾರ್ ಸಿಂಗ್ ಮೊದಲಾದವರು ಇದ್ದರು.

ಅರಣ್ಯ ಸಂಚಾರಿ ಆರ್‌ಎಫ್‌ಓ ಸುರೇಂದ್ರ ಮನೆ, ಕಚೇರಿಯ ಮೇಲೆ ಲೋಕಾ ದಾಳಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ಅರಣ್ಯ ಸಂಚಾರಿ ದಳದ ಆರ್‌ಎಫ್‌ಒ ಕೆ. ಸುರೇಂದ್ರ ಅವರ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ದಾಳಿ ನಡೆಸಿ, ಕೋಟ್ಯಂತರ ಬೆಲೆಬಾ ಳುವ 12 ಮನೆಗಳಿರುವ ಅಪಾರ್ಟ್ ಮೆಂಟ್ ಮಾಲೀಕ ಎಂಬುದನ್ನು ಪತ್ತೆ ಹಚ್ಚಿದ್ದಾರೆ. ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪದಲ್ಲಿ ಕೆ. ಸುರೇಂದ್ರ ವಿರುದ್ಧ ಚಾಮರಾಜ ನಗರ ಲೋಕಾಯುಕ್ತ ಕಚೇರಿಯಲ್ಲಿ ದೂರು ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ ಸುರೇಂದ್ರ ಅವರಿಗೆ ಸೇರಿದ ಶ್ರೀರಾಂಪುರ 2ನೇ ಹಂತದಲ್ಲಿರುವ ಮನೆ, 12 ಮನೆಗಳಿರುವ ಅಪಾರ್ಟ್ ಮೆಂಟ್, ಆಶೋಕಪುರಂ ಅರಣ್ಯ ಭವನದಲ್ಲಿರುವ ಕಚೇರಿ ಮತ್ತು ಎಚ್.ಡಿ. ಕೋಟೆಯ ಬೆಳತ್ತೂರು ಗ್ರಾಮದಲ್ಲಿರುವ ಸಹೋದರನ ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಪರಿಶೀಲನೆ ನಡೆಸಿದ್ದಾರೆ.

ಈ ದಾಳಿಯಲ್ಲಿ ಶ್ರೀರಾಂಪುರ 2ನೇ ಹಂತದಲ್ಲಿ ಅಪಾರ್ಟ್‌ಮೆಂಟ್ (12ನೇ ಮನೆಗಳು), ಮೈಸೂರು ತಾಲೂಕು ಕೆಂಚಲಗೂಡು ಕೆಎಚ್‌ಬಿ ಕಾಲೋನಿಯಲ್ಲಿ 1 ನಿವೇಶನ, 350 ಗ್ರಾಂ ತೂಕದ ಚಿನ್ನಾಭರಣ ಪತ್ತೆಯಾಗಿದೆ. ಆರೋಪಿತರು ಶೇ.130 ರಷ್ಟು ಅಧಿಕ ಪ್ರಮಾಣದ ಆಸ್ತಿಪಾಸ್ತಿ ಹೊಂದಿರುವುದು ಗೊತ್ತಾಗಿದೆ.

ಲೋಕಾಯುಕ್ತ ಇನ್ಸ್ ಸ್ಪೆಕ್ಟರ್ ಗಳಾದ ಕೆ.ಎನ್. ಸುಧಾಕರ, ಎಸ್. ಪ್ರಶಾಂತ್, ಕೆ.ಎನ್. ಗಿರೀಶ್ ನೇತೃತ್ವದಲ್ಲಿ ಚಾಮರಾಜನಗರ ಮತ್ತು ಮೈಸೂರು ಲೋಕಾಯುಕ್ತ ಪೊಲೀಸರು ಈ ದಾಳಿ ನಡೆಸಿದ್ದಾರೆ.

ಹುಟ್ಟುಹಬ್ಬಕ್ಕಾಗಿ ಕೇಕ್, ಸ್ವೀಟ್ ತೆಗೆದುಕೊಂಡು ಹೋಗುತ್ತಿದ್ದ ತಂದೆ ಸಾವು

• **ಕನ್ನಡಪ್ರಭ ವಾರ್ತೆ** ಹುಣಸೂರು

ತನ್ನ ಮಗನ ಹುಟ್ಟುಹಬ್ಬದ ಅಂಗವಾಗಿ ಕೇಕ್ ಮತ್ತು ಸ್ವೀಟ್ ಗಳನ್ನು ತೆಗೆದುಕೊಂಡು ಹೋಗುತ್ತಿದ್ದ ವೇಳೆ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬರು ಸ್ಥಳದಲ್ಲೆ ವ್ಯ ತ ಪ ಟ್ಟ ಘಟನೆ ತಾಲೂಕಿನ ಹಂಚ್ಯಾ ಗ್ರಾ ವ ದ ಕೋಳಿ ಫಾರಂ ಬಳಿ ಬುಧವಾರ ಬೆಳಗ್ಗೆ ಸಂಭವಿಸಿದೆ.



ಎಚ್.ಡಿ. ಕೋಟೆ ತಾಲೂಕಿನ ಅಣ್ಣೂರ್‌ಭೀಮನಹಳ್ಳಿ ಗ್ರಾಮದ ವಾಸಿ ವೆಂಕಟೇಶ್ ಅವರ ಪುತ್ರ ಹಾಗೂ ಹಂಚ್ಯಾ ಗ್ರಾಮದ ಪೆಟ್ರೋಲ್ ಬಂಕ್ ಕಾರ್ಮಿಕ ಎಚ್.ವಿ. ರಾಜೇಶ್ (ಮೃತಪಟ್ಟ ದುರ್ದೈವಿ). ಅವರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ರಾಜೇಶ್ ತನ್ನ ಮಗನ ಹುಟ್ಟುಹಬ್ಬಕ್ಕಾಗಿ ಹುಣಸೂರಿನಿಂದ ತನ್ನ ಬೈಕ್‌ನಲ್ಲಿ ಕೇಕ್ ಮತ್ತು ಸ್ವೀಟ್ ತೆಗೆದುಕೊಂಡು ಮನೆಗೆ ಹೋಗುವಾಗ ಅದೇ ಸಮಯಕ್ಕೆ ಕೋಟೆ ಕಡೆಯಿಂದ ಹುಣಸೂರು ಕಡೆಗೆ ಕ್ಯಾಂಟರ್ ವಾಹನ ಎದುರಿನಿಂದ ಬಂದು ಡಿಕ್ಕಿ ಹೊಡೆದಿದೆ.

ಅಂತ್ಯಕ್ರಿಯೆಯನ್ನು ಗುರುವಾರ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ತಲೆಯ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿ ಕೊಲೆ

ಎಚ್.ಡಿ. ಕೋಟೆ : ವ್ಯಕ್ತಿಯೊಬ್ಬರ ಮೇಲೆ ಸಿಮೆಂಟ್ ಇಟ್ಟಿಗೆಯನ್ನು ಎತ್ತಿ ಹಾಕಿ ಕೊಲೆ ಮಾಡಿರುವ ಘಟನೆ ತಾಲೂಕಿನ ಬೆಳತ್ತೂರು ಗ್ರಾಮದಲ್ಲಿ ಮಂಗಳವಾರ ತಡ ರಾತ್ರಿ ಜರುಗಿದೆ.

ಬೆಳತ್ತೂರು ಗ್ರಾಮದ ಸರ್ವೆ ನಂಬರ್18ರಲ್ಲಿ ಸುಮಾರು 20 ವರ್ಷದಿಂದ ವಾಸವಾಗಿದ್ದ ಕುಮಾರ ಕೊಲೆಯಾದ ವ್ಯಕ್ತಿ.

ಪಟ್ಟಣದ ಠಾಣೆಯಲ್ಲಿ ಮೃತ ಕುಮಾರ (63) ಅವರ ತಮ್ಮ ರಮೇಶ್ ನೀಡಿದ ದೂರಿನ ಮೇರೆಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಮೈಸೂರು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡಿರುತ್ತಾರೆ.

ಎನ್‌ಕೋರ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್ (ಎನ್‌ಕೋರ್ ಎಆರ್‌ಸಿ)
ಇಎಆರ್‌ಸಿ-ಇಒಟಿ-019-ಟ್ರಸ್ಟ್‌ನ ಟ್ರಸ್ಟಿಯಾಗಿ ತನ್ನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ
ಎನ್‌ಕೋರ್ ಎಆರ್‌ಸಿ ಕಾರ್ಪೋರೇಟ್ ಕಛೇರಿ ವಿಳಾಸ: 5ನೇ ಮಹಡಿ, ಪ್ಲಾಟ್ ಸಂ. 137, ಸೆಕ್ಟರ್ 44, ಗುರುಗ್ರಾಮ್- 122002, ಹರಿಯಾಣ

ಇ-ಹರಾಜು ಸಾರ್ವಜನಿಕ ಸೂಚನೆ

2002ರ ಭದ್ರತಾ ಹಿತಾಸಕ್ತಿ (''ಕಾಯಿದೆ'') ನಿಯಮಗಳು 8(6) ಮತ್ತು ಪ್ರಾವಿಸೋ 9(1)ರಡಿ ಓದಿಕೊಳ್ಳಬೇಕಾದ ಭದ್ರತಾ ಆಸ್ತಿಗಳ ಮತ್ತು 2002 (''ಸರ್ಫೇಸಿ ಕಾಯಿದೆ'') ಭದ್ರತಾ ಹಿತಾಸಕ್ತಿ (ಜಾರಿ) ಪುನರ್‌ನಿರ್ಮಾಣ ಆಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ಸೂಚನೆ.
ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ಗಳಿಗೆ ಸೂಚನೆ ನೀಡುವುದೇನೆಂದರೆ **ಎಇಆರ್‌ಸಿ-ಇಒಟಿ-001- ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿದ್ದು, ಎನ್‌ಕೋರ್ ಎಆರ್‌ಸಿ (ಸೆಕ್ಯೂರ್ಡ್ ಕ್ರೆಡಿಟರ್)ಗ ನಿಯೋಜಿಸಲಾದ ಸಾಲದ ಖಾತೆಯಲ್ಲಿನ ಬಾಕಿಗಾಗಿ ಸಾಲಕ್ಕಾಗಿ ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಗಳನ್ನು ಅಡಮಾನ/ಭಾರ್ಜಿಡ್‌ಆಗಿ ಡಿಸಿಬಿ ಬ್ಯಾಂಕ್ ಲಿಮಿಟೆಡ್‌ಗೆ ಸ್ವಾಧೀನತೆಗೆ ಕೊಟ್ಟು, ಡಿಸಿಬಿ ಬ್ಯಾಂಕ್ ಲಿಮಿಟೆಡ್‌ನ ಅಧಿಕಾರಿಗಳು ಬಾಕಿ ವಸೂಲಿಗಾಗಿ ದಿನಾಂಕ **26.06.2026** ರಂದು ಇದ್ದಂತೆ **ರೂ. 6,20,47,537.82/-** (ಆರು ಕೋಟಿ ಇಪ್ಪತ್ತು ಲಕ್ಷದ ನಲವತ್ತೇಳು ಸಾವಿರದ ಐದುನೂರ ಮೂವತ್ತೇಳು ರೂ. ಮತ್ತು ಎಂಭತ್ತೆರಡು ಪೈಸೆ ಮಾತ್ರ) ಗಳ ಬಾಕಿ ಮತ್ತು **27.06.2026** ರಿಂದ ಒಪ್ಪಂದದ ದರದಲ್ಲಿ ಎನ್‌ಕೋರ್ ಎಆರ್‌ಸಿ (ಸೆಕ್ಯೂರ್ಡ್ ಕ್ರೆಡಿಟರ್) ಸಾಲಗಾರರಿಂದ ಬಾಕಿ ಉಳಿಸಿಕೊಂಡಿರುವ ಮೊತ್ತ ಇತರೆ ವೆಚ್ಚಗಳು, ಶುಲ್ಕ ಇತ್ಯಾದಿ ಸೇರಿದಂತೆ ವಸೂಲಿಗಾಗಿ **10.12.2026**ರ ಬೆಳಿಗ್ಗೆ **11:00** ಗಂಟೆಗೆ ''ಎಲ್ಲಿ ಏನಿದೆಯೋ ಹಾಗೆಯೇ, '', ''ಎಲ್ಲಿ ಹೇಗಿದಿಯೋ'' ಮತ್ತು ''ಎಲ್ಲಿ ಏನೇನಿದಿಯೋ ಹಾಗೆಯೇ ಆಧಾರದಲ್ಲಿ'' ಮಾರಾಟ ಮಾಡಲಾಗುವುದು. ಸಾಲಗಾರರು ಅಂದರೆ: ಮೆ॥ ಪ್ರಣವ್ ಅಸೋಸಿಯೇಟ್ಸ್, (2) ಶ್ರೀ ಜಿ.ಎನ್, ಅಶ್ವಿನ್ ಕುಮಾರ್ ಮತ್ತು (3) ಶ್ರೀಮತಿ ಬಿ. ರಮ್ಯ ಕೃಷ್ಣ
ಅಡಮಾನವಿಟ್ಟರುವ ಸ್ಥಿರಾಸ್ತಿಗಳ ವಿವರಣೆ, ಭದ್ರತಾ ಆಸ್ತಿಗಳ ಮೀಸಲು ಬೆಲೆಯ ವಿವರಣೆ, ಅರ್ನೆಸ್ಟ್ ಮನಿ ಡಿಪಾಸಿಟ್ ಮತ್ತು ಬಿಡ್ಡಿಂಗ್ ಪ್ರಕ್ರಿಯೆಯ ಕನಿಷ್ಠ ಠೇವಣಿ ಮೊತ್ತ ಈ ಕೆಳಗಿನಂತಿವೆ:

ಐಟಂ ಕ್ರ. ಸಂ.	ಖಾತೆಯ ಹೆಸರು	ಆಸ್ತಿಯ ವಿವರಣೆ	ಮೀಸಲು ಬೆಲೆ (ರೂ.ಗಳಲ್ಲಿ)	ಅರ್ನೆಸ್ಟ್ ಮನಿ ಡಿಪಾಸಿಟ್ (ರೂ.ಗಳಲ್ಲಿ)	ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಕನಿಷ್ಠ ಹೆಚ್ಚಳದ ಮೊತ್ತ (ರೂ.ಗಳಲ್ಲಿ)
1.	(1). ಮೆ॥ ಪ್ರಣವ್ ಅಸೋಸಿಯೇಟ್ಸ್, (2). ಶ್ರೀ ಜಿ. ಎನ್. ಅಶ್ವಿನ್ ಕುಮಾರ್ (3). ಶ್ರೀಮತಿ ಬಿ. ರಮ್ಯಾ ಕೃಷ್ಣ.	ಸಕಲ ಸಮಸ್ತವೂ ಸೇರಿದಂತೆ ಆಸ್ತಿ, ಮುನಿಸಿಪಲ್ ಅಸೆಸ್‌ಮೆಂಟ್ ಸಂ. 1421/1365-1366 (ಹಳೆಯ ಸಂ.946/803), ಚಿಂದ್ರಮೌಳೀಶ್ವರ ರಸ್ತೆ, ಕೆ ಆರ್ ನಗರ ಪಟ್ಟಣ, ಮೈಸೂರು ಜಿಲ್ಲೆ ಇಲ್ಲಿರುವ ಆಸ್ತಿಯ ಆಳತೆ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 100 ಅಡಿ, ಮತ್ತು ಚಕ್ಕುಬಂದಿ ಈ ಕೆಳಗಿನಂತೆ: ಪೂರ್ವದಲ್ಲಿ: ವೈ.ಎಸ್ ಜಗದೀಶ್ ಅವರ ಆಸ್ತಿ, ಪಶ್ಚಿಮಕ್ಕೆ: ಶ್ರೀ ಜಗದ್ಗುರು ಯೋಗಾನಂದೀಶ್ವರ ಮಠದ ಆಸ್ತಿ, ಉತ್ತರದಲ್ಲಿ: ಚಿಂದ್ರಮೌಳೀಶ್ವರ ರಸ್ತೆ, ದಕ್ಷಿಣದಲ್ಲಿ: ಕನ್ಸರ್‌ವೆನ್ಸಿ ಗಲ್ಲಿ.	93,35,000.00 (ತೊಂಭತ್ತೆದು ಲಕ್ಷದ ಮೂವತ್ತೈದು ಸಾವಿರ ಮಾತ್ರ)	9,33,500.00 (ಒಂಭತ್ತು ಲಕ್ಷದ ಮೂವತ್ತ ಮೂರು ಸಾವಿರದ ಐದು ರೂ.ಗಳು ಮಾತ್ರ)	50,000.00 (ಐವತ್ತು ಸಾವಿರ ರೂ.ಗಳು ಮಾತ್ರ)

ಭದ್ರತಾ ಆಸ್ತಿಯ ಪರಿಶೀಲನಾ ದಿನಾಂಕ	27/11/2026 ಬೆಳಿಗ್ಗೆ 10:00 ರಿಂದ 3:00 ಗಂಟೆ ನಡುವೆ
ಆನ್‌ಲೈನ್‌ನಲ್ಲಿ ಬಿಡ್ ಸಲ್ಲಿಸಲು ಅಂತಿಮ ದಿನಾಂಕ	09/12/2026ರ ಮಧ್ಯಾಹ್ನ 3:00 ಗಂಟೆ ಒಳಗೆ
ಇ-ಹರಾಜಿನ ದಿನಾಂಕ ಮತ್ತು ಸಮಯ	10/12/2026ರ ಬೆಳಿಗ್ಗೆ 11:00 ರಿಂದ 1:00 ಗಂಟೆ ಜೊತೆಗೆ ಅನಿಯಮಿತ 5 ನಿಮಿಷಗಳ ವಿಸ್ತರಣೆ ಯೊಂದಿಗೆ ಷರತ್ತು ಮತ್ತು ನಿಬಂಧನೆಗಳು ಈ ಕೆಳಗೆ ವಿವರಿಸಲಾಗಿದೆ. Auction Website: https://bankeauctions.com

ಷರತ್ತು ಮತ್ತು ನಿಬಂಧನೆಗಳು: ಮೇಲ್ಕಂಡ ಭದ್ರತಾ ಆಸ್ತಿ ಭೌತಿಕವಾಗಿ ಎನ್‌ಕೋರ್ ಎಆರ್‌ಸಿ ವಶದಲ್ಲಿರುವ ಭದ್ರತಾ ಆಸ್ತಿಗಳ ಇ- ಹರಾಜು ಮಾರಾಟವು ಭದ್ರತಾ ಸಾಲಿಗರು ಎನ್‌ಕೋರ್ ಎಆರ್‌ಸಿ ಪರವಾಗಿ ''ಎಲ್ಲಿ ಹೇಗಿರುವುದು ಹಾಗೆಯೇ'', ''ಎಲ್ಲಿ ಏನಿದೆಯೋ ಹಾಗೆಯೇ'' ಮತ್ತು ' 'ಎಲ್ಲಿ ಏನು ಉಳಿದಿದೆಯೋ ಹಾಗೆಯೇ'' ಆಧಾರದಲ್ಲಿ ಇ- ಹರಾಜು ಮಾಡಲಾಗುವುದು.
ಇ-ಹರಾಜು ದಿನಾಂಕವನ್ನು ಸಾರ್ವಜನಿಕ ರಜಾ ದಿನವೆಂದು ಘೋಷಿಸಿದರೆ, ದಿನಾಂಕವನ್ನು ಸ್ವಯಂಚಾಲಿತವಾಗಿ ಮರು ದಿನಾಂಕಕ್ಕೆ ವಿಸ್ತರಿಸಲಾಗುತ್ತದೆ.
ಎನ್‌ಕೋರ್ ಎಆರ್‌ಸಿ ಇಎಆರ್‌ಸಿ-ಇಒಟಿ- 001- ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತದೆ. ಸಾರ್ವಜನಿಕ ಸೂಚನೆಯಲ್ಲಿ ಅದರ ಹೆಸರಿನ ಯಾವುದೇ ಸಾರ್ವಜನಿಕ ಸೂಚನೆಯನ್ನು ದಕ್ಕೆ ಅನುಗುಣವಾಗಿ ಅರ್ಥೈಸಿಕೊಳ್ಳಬೇಕು.
ಮಾರಾಟದ ಸೂಚನೆಯ ಷರತ್ತು ಮತ್ತು ನಿಬಂಧನೆಗಳಿಗೆ ದಯವಿಟ್ಟು ಎನ್‌ಕೋರ್ ಎಆರ್‌ಸಿ'ಸ್‌ನ ವೆಬ್‌ಸೈಟ್ ಅಂದರೆ **https://www.encorearc.com and https://bankeauctions.com** ಅನ್ನು ನೋಡುವುದು.
ಆ1717 ಮತ್ತು ಶ್ರೀ ಬಿ.ಎಂ. ನಾಗರಾಜು, ಮೊಬೈಲ್ ಸಂ. 8384074164/ 0124 4527200 ಅಥವಾ ಇ-ಮೇಲ್ k.nagendran@encorearc.com, gentintouch@encorearc.com. ಇವರನ್ನು ಯಾವುದೇ ಹೆಚ್ಚಿನ ಮಾಹಿತಿ ಮತ್ತು ಪ್ರಶ್ನೆಗಳಿಗಾಗಿ ಸಂಪರ್ಕಿಸಿ.

ಕೆ. ನಾಗೇಂದ್ರನ್
ಅಧಿಕೃತ ಅಧಿಕಾರಿ
ಎನ್‌ಕೋರ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್

ದಿನಾಂಕ: 19.11.2026
ಸ್ಥಳ: ಚೆನ್ನೈ

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರು ಈ ಕೆಳಕಂಡ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಏನೇ ತಂಟೆ ತಕರಾರುಗಳಿದ್ದಲ್ಲಿ ದಾಖಲಾತಿ ಸಮೇತ 15 ದಿನಗಳ ಒಳಗೆ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸುವುದು. ಸ್ವತ್ತಿನ ವಿವರ ಕೆಳಕಂಡಂತಿದೆ :-

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮ, ಸರ್ವೆ ನಂ. 1/2, 7/1, 8/2, 14/2, 45/1, 45/2, 58/1, 59/1, 59/2, 275/1, 275/4, 276/1, 278/1, 278/2, 279/1, 281/2, 281/3, 281/4, 281/5, 281/6, 281/8, 291/1, 291/5, ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿ ನಿರ್ಮಿಸಿರುವ "NITHYAANANDHASAGARA-2" ಬಡಾವಣೆಯ, ನಾಗವಾಲ ಗ್ರಾಮ ಪಂಚಾಯ್ತಿ ನಮೂನೆ-9 ರ ಪ್ರಕಾರ ಯೂನಿಕ್ ಸಂಖ್ಯೆ : 152200405128022672, ಸ್ವತ್ತಿನ ಸಂಖ್ಯೆ : M5238/22/682L, ನಿವೇಶನ ಸಂಖ್ಯೆ: 682-L ಕ್ಕೆ ಚಕ್ಕುಬಂದಿ:
ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ : ನಿವೇಶನ ನಂ.639E
ಉತ್ತರಕ್ಕೆ : ನಿವೇಶನ ನಂ.682K
ದಕ್ಷಿಣಕ್ಕೆ : ನಿವೇಶನ ನಂ. 682 M
ಈ ಮಧ್ಯೆ ಇರುವ ಪೂರ್ವಪಶ್ಚಿಮ 18.3 ಮೀಟರ್‌ಗಳು, ಉತ್ತರ ದಕ್ಷಿಣ 12.2 ಮೀಟರ್‌ಗಳು ಒಟ್ಟು 223.260 ಚದರ ಮೀಟರ್‌ಗಳಳ್ಳ ನಿವೇಶನ.
ದಿನಾಂಕ : 18-11-2026
ಸ್ಥಳ : ಮೈಸೂರು
ಆನಂತಮೂರ್ತಿ.ಎಂ,
KAR/674/2000 ವಕೀಲರು & ನೋಟರಿ
ಮದ್ವೇಶ ಕಾಂಪ್ಲೆಕ್ಸ್, ನಜರ್‌ಬಾದ್, ಮೈಸೂರು-10

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಚಿಕ್ಕಜಾತ್ರಾ ಮಹೋತ್ಸವ-2026

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2026ರ ಶ್ರೀ ಚಿಕ್ಕಜಾತ್ರಾ ಮಹೋತ್ಸವದ ಪ್ರಯುಕ್ತ ಜರುಗುವ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು:

1	ದಿ: 22-11-2026 ಭಾನುವಾರ	ಸಂಜೆ: 7.00 ಗಂಟೆಗೆ	"ಶ್ರೀಕಂಠಮುಡಿ ಉತ್ಸವ"
2	ದಿ: 25-11-2026 ಬುಧವಾರ	ಬೆಳಗ್ಗೆ: 9.20 ರಿಂದ 10.00 ಗಂಟೆಯೊಳಗೆ	"ಶ್ರೀ ಮನ್ಮಹಾರಥಾರೋಹಣ"
3	ದಿ: 27-11-2026 ಶುಕ್ರವಾರ	ಸಂಜೆ: 7.00 ಗಂಟೆಗೆ	ಕಪಿಲಾ ನದಿಯಲ್ಲಿ ತೆಪ್ಪೋತ್ಸವ

ಚಿಕ್ಕಜಾತ್ರಾ ಮಹೋತ್ಸವಂಗಳಿಗೆ ನೀವು ಮತ್ತು ನಿಮ್ಮ ಮಿತ್ರ ಕಳತ್ರ ಬಂಧು ಜನ ಸಮೇತರ